ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿ.ಸಿ. ಸಂಖ್ಯೆ:** 918/2025

ಫ್ರಾಸಾ – 78

ಚಾಸಾ – 107

**ಸಾಕ್ಷಿಯು ದಿಃ 30.06.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಸಿ.ಉಪೇಂದ್ರ |
| ತಂದೆಯ ಹೆಸರು | : | ಲೇ. ಚನ್ನೇಗೌಡ |
| ವಯಸ್ಸು | : | 75 ವರ್ಷ |
| ವೃತ್ತಿ | : | ನಿವೃತ್ತ ಡಿ.ವೈ.ಎಸ್.ಪಿ |
| ವಾಸಸ್ಥಳ | : | ಮೈಸೂರು |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

1995 ರಿಂದ 2000 ರವರೆಗೆ ಗುಂಡ್ಲುಪೇಟೆ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದ ಕಡತವನ್ನು ಚಾಸಾ 106 ರವರಿಂದ ಪಡೆದು ಪರಿಶೀಲಿಸಿ ತನಿಖೆ ಮುಂದುವರೆಸಿರುತ್ತೇನೆ. ದಿನಾಂಕ 21.12.1996 ರಂದು ಗುಂಡ್ಲುಪೇಟೆ ತಾಲ್ಲೂಕು ಕಛೇರಿಯಲ್ಲಿ ಪಂಚನಾಮೆ ಸಾಕ್ಷಿಗಳ ಸಮಕ್ಷಮ ಸಂಜೆ 5.00 ರಿಂದ 6.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 67 ಎಂದು, ಸಾಕ್ಷಿಯ ಸಹಿಯನ್ನು ನಿಪಿ 67(ಎ) ಎಂದು ಗುರ್ತಿಸಲಾಯಿತು. ಸದರಿ ಪಂಚನಾಮೆಯ ಮೂಲಕ ಸಾರ್ವಜನಿಕ ವಿತರಣಾ ದಾಖಲಾತಿ, ಸೇಲ್ಸ್ ರಿಜಿಸ್ಟರ್, ರಶೀದಿ ಪುಸ್ತಕ, ದಾಸ್ತಾನು ಬಿಡುಗಡೆ ಪತ್ರ, ಸೇವಾ ಸಹಕಾರ ಸಂಘಗಳ ಪತ್ರಗಳನ್ನು ವಶಪಡಿಸಿಕೊಂಡಿರುತ್ತೇನೆ ಮತ್ತು ಠಾಣಾ ಮಾಲು ಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 26.12.1996 ರಂದು ಮಧ್ಯಾಹ್ನ 3.00 ರಿಂದ 4.00 ಗಂಟೆ ಸಮಯದಲ್ಲಿ ಟಿಎಪಿಸಿಎಂಎಸ್ ಗುಂಡ್ಲುಪೇಟೆ ಗೊಡೌನ್ ನಲ್ಲಿ ಚಾಸಾ 4, 11 ಮತ್ತು 12 ರವರ

ಸಮಕ್ಷಮ ಅಮನಾತ್ತು ಪಂಚನಾಮೆಯನ್ನು ಜರುಗಿಸಿ 70 ಮತ್ತು 100 ಕೆ.ಜಿ ತೂಕದ ಒಟ್ಟು 2659 ಅಕ್ಕಿ ಮೂಟೆಗಳನ್ನು, ಈ ಪೈಕಿ 1336 ಮೂಟೆಗಳು 70 ಕೆ.ಜಿ. ಯವು, 100 ಕೆ.ಜಿ.ತೂಕದ 1323 ಅಕ್ಕಿ ಮೂಟೆಗಳನ್ನು, 100 ಕೆ.ಜಿ. ಯ 166 ಗೋಧಿ ಮೂಟೆಗಳು ಮತ್ತು 100 ಕೆ.ಜಿ. ಯು 100 ಮೂಟೆ ಸಕ್ಕರೆಯನ್ನು ಅಮಾನತ್ತು ಪಡಿಸಿಕೊಂಡು ಟಿಎಪಿಸಿಎಂಎಸ್ ನ ಪ್ರಧಾನ ಕಾರ್ಯದರ್ಶಿ ಚಾಸಾ 4 ರವರ ವಶಕ್ಕೆ ನೀಡಿರುತ್ತೇನೆ ಎಂದು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ 13 ಎಂದು ಗುರುತಿಸಲಾಗಿರುತ್ತದೆ, ಸಾಕ್ಷಿಯ ಸಹಿಯನ್ನು ನಿಪಿ 13(ಎಫ್) ಎಂದು ಗುರ್ತಿಸಲಾಯಿತು.

3. ದಿನಾಂಕ 30.12.1996 ರಂದು ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಮಧ್ಯಾಹ್ನ 1.00 ರಿಂದ 1.30 ರವರೆಗೆ ಚಾಸಾ 4 ಮತ್ತು 14 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಟಿಎಪಿಸಿಎಂಎಸ್ ನ ಮಹಾ ಸಭೆ ನಡವಳಿ ಪುಸ್ತಕವನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ 15 ಎಂದು ಗುರುತಿಸಲಾಗಿರುತ್ತದೆ, ಸಾಕ್ಷಿಯ ಸಹಿಯನ್ನು ನಿಪಿ 15(ಸಿ) ಎಂದು ಗುರ್ತಿಸಲಾಯಿತು.

4. ದಿನಾಂಕ 21.12.1996 ರಂದು ಉಪ ನಿರ್ದೇಶಕರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಮೈಸೂರು ರವರಿಂದ ಅಕ್ಕಿ ದುರೂಪಯೋಗವಾದ ಬಗ್ಗೆ ತನಿಖಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 68 ಎಂದು, ಸಾಕ್ಷಿಯ ಸಹಿಯನ್ನು ನಿಪಿ 68(ಎ) ಎಂದು ಗುರ್ತಿಸಲಾಯಿತು.

5. ದಿನಾಂಕ 20.11.1996 ರಂದು ಟಿಎಪಿಸಿಎಂಎಸ್ ನ ಆರೋಪಿ ರಾಜೇಂದ್ರ ಮತ್ತು ಕುಮಾರಸ್ವಾಮಿ ರವರು 1995–96ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಮಕ್ಕಳಿಗೆ ವಿತರಣೆಯಾಗಬೇಕಿದ್ದ ಅಕ್ಕಿ, ಗೋಧಿ ಮತ್ತು ಸಕ್ಕರೆಯನ್ನು ಬಿಡುಗಡೆ ಮಾಡಿದ ಬಗ್ಗೆ ಶ್ರೀನಿವಾಸ ವ್ಯವಸ್ಥಾಪಕ ರವರಿಂದ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ದಿನಾಂಕ 15.02.1997 ರಂದು ವ್ಯವಸ್ಥಾಪಕರು ಎಫ್.ಸಿ.ಐ ಮೈಸೂರುರವರಿಂದ ಪ್ರಾಥಮಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಹಾರದ ಯೋಜನೆಯಡಿ ಆಹಾರ ವಿತರಣೆ ಮಾಡಲು ಸಂಬಂಧಿಸಿದಂತೆ ಸಾಲ ನೀಡಿದ ಬಗ್ಗೆ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ

19.02.1997 ರಂದು ಚಾಸಾ 4 ರವರ ಹೇಳಿಕೆ ದಾಖಲಿಸಿರುತ್ತೇನೆ. ದಿನಾಂಕ 31.07.1997 ರಂದು ಚಾಸಾ 1 ರವರ ಮರು ಹೇಳಿಕೆ ಮತ್ತು ಚಾಸಾ 2 ರವರ ಹೇಳಿಕೆ ದಾಖಲಿಸಿರುತ್ತೇನೆ. ಚಾಸಾ 11, 18, 24, 28, 29, 35, 37, 39, 40 ರಿಂದ 46, 48 ರಿಂದ 49, 50, 51, 52, 54, 58, 59, 60, 62, 64, 65, 67 ರಿಂದ 88 ರವರ ಹೇಳಿಕೆ ದಾಖಲಿಸಿರುತ್ತೇನೆ. ಮುಂದಿನ ತನಿಖೆಗಾಡಿ ಕಡತವನ್ನು ಚಾಸಾ 108 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲು :– ಆರೋಪಿಗಳ ಪರ ವಕೀಲರಿಂದ**

ಟಿಎಪಿಸಿಎಂಎಸ್ ನಲ್ಲಿ ನಾನು ಯಾವುದೇ ಪಂಚನಾಮೆ ಮಾಡಿಲ್ಲ, ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಹಾಗೂ ಕಾರ್ಯದರ್ಶಿರವರಿಗೆ ಅವುಗಳನ್ನು ಹಸ್ತಾಂತರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಂಚನಾಮೆ ಮೂಲಕ ಸಭಾ ನಡುವಳಿ ದಾಖಲೆಯನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎಫ್.ಸಿ.ಐ ದಿಂದ ನಾನು ಯಾವುದೇ ವರದಿ ತರಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಎಫ್.ಸಿ.ಐ ರವರಿಂದ ಮಧ್ಯಾಹ್ನದ ಊಟಕ್ಕೆ ಸಂಬಂಧಿಸಿದಂತೆ ಆಹಾರ ಪದಾರ್ಥಗಳು ಸರಬರಾಜು ಮಾಡಿರುವುದರ ಬಗ್ಗೆ ಯಾವುದೇ ವರದಿ ತರಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಯಾವುದೇ ಮರು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನಮ್ಮ ಸಮಕ್ಷಮ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಮೇಲೆ ಸುಳ್ಳು ಹೇಳಿಕೆಗಳನ್ನು ಕ್ರೂಡಿಕರಿಸಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ